# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 875 |
| ಉತ್ತರಿಸುವ ದಿನಾಂಕ | 13-12-2023 |
| ಮಾನ್ಯ ಸದಸ್ಯರ ಹೆಸರು | ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋಲಾರ ಜಿಲ್ಲೆ ಕೋಲಾರ ತಾಲ್ಲೂಕು, ಪೇಟೆ ಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 28/1ರಲ್ಲಿ 15 ಗುಂಟೆ ಜಮೀನು ಭೂಪರಿವರ್ತನೆಗೊಂಡು, ಒಬ್ಬರ ಹೆಸರಿಗೆ ದಿನಾಂಕ:26-21988ರಲ್ಲಿ (ಕ್ರಯ ಪತ್ರದ ಸಂಖ್ಯೆ:2626/87-88) ಮಾರಾಟವಾಗಿ, ಖಾತೆ, ಕಂದಾಯಗಳನ್ನು ಕಾಲಕಾಲಕ್ಕೆ ಪಾವತಿಸಿಕೊಂಡು ಬರುತ್ತಿದ್ದರೂ ಸಹ ಸದರಿ ಜಮೀನನ್ನು ದಿನಾಂಕ:28-10-2019ರಲ್ಲಿ ಅಕ್ರಮವಾಗಿ ಬೇರೊಬ್ಬರ ಹೆಸರಿಗೆ ಕ್ರಯ ಪತ್ರದ ಸಂಖ್ಯೆ:KLR /1/05020/2019-20 ಹಾಗೂ ಇ-ಸ್ವತ್ತಿನ ಸಂಖ್ಯೆ:15190070120121044 ರೀತ್ಯಾ ನಕಲಿ ದಾಖಲೆ ಸೃಷ್ಟಿಸಿ ಕ್ರಯ ಪತ್ರದ ಕರಾರನ್ನು ನೋಂದಣಿ ಮಾಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋಲಾರ ಉಪ ನೋಂದಣಿ ಕಛೇರಿಯಲ್ಲಿ ದಿನಾಂಕ:24-10-2019ರಂದು ನೋಂದಣಿ ಸಂಖ್ಯೆ: KLR/1/05020/2019-20 ರಲ್ಲಿ ಶ್ರೀ ಅರ್ಜುನಪ್ಪ, ಶ್ರೀಮತಿ ವಿಜಯಲಕ್ಷ್ಮೀ, ಶ್ರೀ ಎ.ವಿನಯ್, ಶ್ರೀ ಎ.ಸಂದೀಪ್‌ಕುಮಾರ್, ಸರಸಮ್ಮ ಮತ್ತು ಭಾಗ್ಯಮ್ಮ.ವಿ ರವರುಗಳು ಶ್ರೀ.ಜನಾರ್ಧನ್.ಎಂ ಮತ್ತು ನಾರಾಯಣಗೌಡ.ಎ ರವರುಗಳಿಗೆ ಸ್ವಾಧೀನ ರಹಿತ ಕ್ರಯದ ಕರಾರು ಪತ್ರವನ್ನು ನೋಂದಾಯಿಸಿರುತ್ತಾರೆ. ಸದರಿ ಕ್ರಯದ ಕರಾರು ಪತ್ರ ನೋಂದಣಿಯಾದ ಸಮಯದಲ್ಲಿ ಹಾಜರುಪಡಿಸಿರುವ ಪಕ್ಷಕಾರರ ಆಧಾರ್ ಕಾರ್ಡ್‌ಗಳು ಮತ್ತು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪಂಚಾಯಿತಿಯಿಂದ ವಿತರಣೆಯಾದ ಇ-ಖಾತೆ ಸಂಖ್ಯೆ: 15190070101201021044ನ್ನು ಹಾಜರುಪಡಿಸಿದ್ದು, ಮಾರಾಟಗಾರರ ಹೆಸರಿನಲ್ಲಿ ಇ-ಖಾತೆ ಇರುವುದನ್ನು ಪರಿಶೀಲಿಸಿ ನೋಂದಣಿಯನ್ನು ಮಾಡಿರುತ್ತಾರೆ.<br><br>ಪ್ರಶ್ನಿತ ದಸ್ತಾವೇಜು ಸ್ವಾಧೀನ ರಹಿತ ಕ್ರಯದ ಕರಾರು ಪತ್ರವಾಗಿದ್ದು, ಸದರಿ ದಸ್ತಾವೇಜಿನ ಮುಖಾಂತರ ಸ್ವತ್ತು ಹಸ್ತಾಂತರಗೊಂಡಿರುವುದಿಲ್ಲ. |

| | | |
|---|---|---|
| ಆ | ಹಾಗಿದ್ದಲ್ಲಿ, ಇದರ ಪೂರ್ಣ ವಿವರಗಳನ್ನು ನೀಡುವುದು; | ಪ್ರಶ್ನಿತ ದಸ್ತಾವೇಜಿಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 344 ಮುನೋಮು 2008 ದಿನಾಂಕ: 06-04-2009 ರ ನಿರ್ದೇಶನದಂತೆ ನೋಂದಾಯಿಸಲಾಗಿದೆ. ಸದರಿ ಪ್ರಕರಣದಲ್ಲಿ ಇ-ಖಾತಾ ನೀಡುವ ಅಥವಾ ಬದಲಾಯಿಸುವ ಅಧಿಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೇರಿರುತ್ತದೆ. |
| ಇ | ಸದರಿ ಅಕ್ರಮದಲ್ಲಿ ಭಾಗಿಯಾದ ಭೂಗಳ್ಳರ ಹಾಗೂ ಅಧಿಕಾರಿ/ನೌಕರರ ಪೂರ್ಣ ವಿವರಗಳನ್ನು ಒದಗಿಸುವುದು: | ಅನ್ವಯಿಸುವುದಿಲ್ಲ. |
| ಈ | ಸದರಿ ಅಕ್ರಮದಾರರ ವಿರುದ್ಧ ಇದುವರೆವಿಗೆ ಸರ್ಕಾರ ತೆಗೆದುಕೊಳ್ಳಲಾದ ಕ್ರಮಗಳೇನು; | |
| ಉ | ಯಾವ ಕಾಲ-ಮಿತಿಯಲ್ಲಿ ಅಕ್ರಮ ಕಬಳಕೆಯನ್ನು ತೆರವುಗೊಳಿಸಿ, ವಂಚನೆಗೊಳಗಾದವರಿಗೆ ನ್ಯಾಯ ಒದಗಿಸಲಾಗುವುದು? | |

ಕಂಇ/240/ಎಂಎನ್ಎಸ್ಎ/2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು